# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

**ಸಿ. ಸಿ. 42-2023**

ಫಿರ್ಯಾದಿಃ ಕರ್ನಾಟಕ ಸರ್ಕಾರ, ಚಿತ್ತಾಕುಲ ಪೋಲಿಸ ಠಾಣೆ , ಕಾರವಾರ

-ವಿರುದ್ಧ-

ಆರೋಪಿಃ 1. ರಾಮದಾಸ ರಘನಾಥ್ ನಾಯ್ಕು , ವರ್ಷ 50,
ಉದ್ಯೋಗಃ ಶಾಪ್ ಕೀಪರ್, ವಾಸಃ ಹಾಲಿ :
ಗಣಪತಿ ದೇವಸ್ಥಾನ, ಸದಾಶಿವಗಡ, ಕಾರವಾರ.
ಖಾಯಂಃ 627F, ಗಿಂಡಿ ದೇವಸ್ಥಾನ,
ಕನಸಗಿರಿ, ಕಾರವಾರ.

ನಾನು **ಶ್ರೀ ಧನುರಾಜ್. ಎಸ್.ಎಂ. ಬಿ.ಎ. ಎಲ್.ಎಲ್.ಬಿ., ಪ್ರ.ದ.ನ್ಯಾ ದಂ.**, **ಕಾರವಾರ** ಆದ ನಾನು ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ದೋಷಾರೋಪಣೆ

ನ್ಯಾಯಾಲಯದ ವ್ಯಾಪ್ತಿಯ ಚಿತ್ತಾಕುಲ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ದಿಃ 23-07-2022 ರಂದು 3.50 ಘಂಟೆಗೆ ಸದಾಶಿವಗಡದ ಗಣಪತಿ ದೇವಾಸ್ಥಾನದ ಆರ್ಕನ ಎದುರುಗಡೆ ರಸ್ತೆಯನ್ನು ದಾಟಿ ಸುಮಾರು 50 ಮೀಟರ್ ದೂರದಲ್ಲಿ ಪಶ್ಚಿಮಕ್ಕೆ ಆರೋಪಿತನಾದ ನೀನು ಗೋವಾ ರಾಜ್ಯಕ್ಕೆ ಸೇರಿದ ಸಾರಾಯಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದು, 750 ಎಂ ಎಲ್ ಲೈಟ್ ಹಾರ್ಸ ವಿಸ್ಕಿಯ ಪ್ರಿಮಿಯಮ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 41 ಬಾಟಲಿಗಳು, 750 ಎಂ ಎಲ್ ನ ರೀಲ್ಸ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 39 ಬಾಟಲಿಗಳು, 180 ಎಂ ಎಲ್ ನ ರೀಲ್ಸ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 42 ಬಾಟಲಿಗಳು, 180 ಎಂ ಎಲ್ ನ 7 years old ಬ್ಲೆಂಡೆಡ್ old Monk very old vatted special xxx Rum 30 ಬಾಟಲಿಗಳು ಹಾಗೂ 180 ಎಂ ಎಲ್ ನ ಡಾವೇಲ್ಸ ನಂ.1 ರಿಸರ್ವ್ ವಿಸ್ಕಿ ಓರಿಜಿನಲ್ 36 ಬಾಟಲಿಗಳನ್ನು ಗೋವಾ ರಾಜ್ಯದಿಂದ ನೀವು ಅಕ್ರಮವಾಗಿ ಸಾಗಟ ಮಾಡಿ ಅವುಗಳನ್ನು ಯಾವುದೇ ಪಾಸ್ ಯಾ ಪರ್ಮಿಟ್ ಇಲ್ಲದೇ ಅಕ್ರಮವಾಗಿ ಸಂಗ್ರಹ ಇಟ್ಟಿದ್ದಾಗ ಸಿಕ್ಕಿ ಬಿದ್ದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32** ಕೆಳಗೆ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತ ನಾದ ನೀನು 750 ಎಂ ಎಲ್ ಲೈಟ್ ಹಾರ್ಸ ವಿಸ್ಕಿಯ ಪ್ರಿಮಿಯಮ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 41 ಬಾಟಲಿಗಳು, 750 ಎಂ ಎಲ್ ನ ರೀಲ್ಸ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 39 ಬಾಟಲಿಗಳು, 180 ಎಂ ಎಲ್ ನ ರೀಲ್ಸ್ ಬ್ಲೆಂಡೆಡ್ ಮಾಲ್ಟ ವಿಸ್ಕಿಯ 42 ಬಾಟಲಿಗಳು, 180 ಎಂ ಎಲ್ ನ 7 years old ಬ್ಲೆಂಡೆಡ್ old Monk very old vatted special xxx Rum 30 ಬಾಟಲಿಗಳು ಹಾಗೂ 180 ಎಂ ಎಲ್ ನ ಡಾವೇಲ್ಸ ನಂ.1 ರಿಸರ್ವ್ ವಿಸ್ಕಿ ಓರಿಜಿನಲ್ 36 ಬಾಟಲಿಗಳನ್ನು ಗೋವಾ ರಾಜ್ಯದಿಂದ ನೀವುಗಳು ಅಕ್ರಮವಾಗಿ ಸಾಗಟ ಮಾಡಿ ಅವುಗಳನ್ನು ನೀವು ಮಾರಾಟ ಮಾಡಿ ಲಾಭ ಪಡೆಯುವ ಉದ್ದೇಶದಿಂದ ನಿನ್ನ ಸಾಧೀನದಲ್ಲಿ ಇಟ್ಟುಕೊಂಡು ಸಾಗಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **34** ಕೆಳಗೆ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ?

ಈ ಮೇಲ್ಕಂಡ ದೋಷಾರೋಣೆಗೆ ನೀವುಗಳು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ದೋಷರೋಪಣೆ ತಿಳಿಯಿತೆ?
**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?
**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **17-02-2024** ರಂದು ಆರೋಪಿತರಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಪ್ರ.ಪ್ರ.ದ.ನ್ಯಾ ದಂ., ಕಾರವಾರ.**